ಮೊತ್ತದ ಪೈಕಿ ರೂ.219.03 ಕೋಟಿ ಬಿಡುಗಡೆಯಾಗಿರುತ್ತದೆ. ಇನ್ನು ರೂ.173.00 ಕೋಟಿ ಅನುದಾನವನ್ನು ಕಾಯ್ದಿರಿಸಲಾಗಿದೆ.

ಇ) ಲಭ್ಯವಿರುವ ಅನುದಾನಕ್ಕೊಳಪಟ್ಟು ಬಡ್ಡಿ ಸಹಾಯಧನದ ಮೊತ್ತವನ್ನು ಸಹಕಾರ ಸಂಘಗಳಿಗೆ ಪಾವತಿಸಲಾಗುವುದು.

ಮೂಲಭೂತ ಸೌಲಭ್ಯಗಳ ಕೊರತೆ

209 (319)

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಷಿ ಮಾರುಕಟ್ಟೆ ಸಮಿತಿಗಳ ಸಂಖ್ಯೆ ಎಷ್ಟು?(3 ವರ್ಷಗಳ ವಾರ್ಷಿಕ ಆದಾಯದ ವಿವರ ನೀಡುವುದು)

ಆ) ಜಿಲ್ಲಾ ಕೃಷಿ ಮಾರುಕಟ್ಟೆಯಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಏನು ಕ್ರಮ ತೆಗೆದುಕೊಳ್ಳಲಾಗುವುದು?

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಕೆ. ಬೆಳ್ಳುಬ್ಬಿ
(ಕೃಷಿ ಮಾರುಕಟ್ಟೆ ಮತ್ತು ಹಜ್ ಹಾಗೂ ವಕ್ಫ್ ಸಚಿವರು)

ಅ) ಐದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ. ಕಳೆದ 3 ವರ್ಷಗಳ ವಾರ್ಷಿಕ ಆದಾಯದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಹೌದು

ಇ) ಮಾರುಕಟ್ಟೆ ಸಮಿತಿಗಳ ಪ್ರಮುಖ ಆದಾಯ ಮೂಲ ಮಾರುಕಟ್ಟೆ ಶುಲ್ಕವಾಗಿರುತ್ತದೆ. ಸದರಿ ಮಾರುಕಟ್ಟೆ ಶುಲ್ಕದ ಆದಾಯದಲ್ಲಿ ಶಾಸನಬದ್ಧ ಹಾಗೂ ಆಡಳಿತ ನಿರ್ವಹಣೆ ವೆಚ್ಚಗಳನ್ನು ಭರಿಸಿ ಅಭಿವೃದ್ಧಿ ಕಾಮಗಾರಿಗಳನ್ನು ಸಂಬಂಧಪಟ್ಟ ಮಾರುಕಟ್ಟೆ ಸಮಿತಿಗಳು ವಾರ್ಷಿಕ ಕ್ರಿಯಾ ಯೋಜನೆ ರೂಪಿಸಿ ಕಾರ್ಯಗತಗೊಳಿಸುತ್ತವೆ.

2011–12ನೇ ಸಾಲಿನಲ್ಲಿ ಈ ಕೆಳಕಂಡ ಕ್ರಿಯಾ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಅವುಗಳನ್ನು ಕಾರ್ಯಗತಗೊಳಿಸಲಾಗಿದೆ.

1. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಲ್ಕಿ ಸಮಿತಿ ನಿಧಿಯಿಮದ ರೂ.39.00 ಲಕ್ಷ
2. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಔರಾದ್ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಪಡಿಸುವ ಯೋಜನೆಯಡಿಯಲ್ಲಿ ರೂ.25.00 ಲಕ್ಷ

2012–13ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ವಾರ್ಷಿಕ ಕ್ರಿಯಾ ಯೋಜನೆಯ ವಿವರ ನೀಡಿದೆ

ಸಮಿತಿಯ ಹೆಸರು	ರೂ ಲಕ್ಷಗಳಲ್ಲಿ
ಬೀದರ್	388.55
ಭಾಲ್ಕಿ	49.60
ಹುಮ್ನಾಬಾದ್	72.00
ಬಸವಕಲ್ಯಾಣ	30.61
ಔರಾದ್	

ಈವರೆಗೆ ಒದಗಿಸಿರುವ ಸೌಲಭ್ಯಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.

ಈ) 2011–12ನೇ ಸಾಲಿನಲ್ಲಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಭಾಲ್ಕಿ, ಔರಾದ್, ಬಸವಕಲ್ಯಾಣ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ತಲಾ ರೂ.25.00 ಲಕ್ಷ ಮಂಜೂರು ಮಾಡಲಾಗಿದೆ.

ಅನುಬಂಧ

ಕ್ರ ಸಂ	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹೆಸರು	ಆದಾಯ (ರೂ ಗಳಲ್ಲಿ)		
		2009–10	2010–11	2011–12
1	ಕೃಉಮಾಸ ಔರಾದ್	17,25,224	27,90,736	22,05,714
2	ಕೃಉಮಾಸ ಬೀದರ್	2,45,05,474	4,16,53,237	3,85,88,970
3	ಕೃಉಮಾಸ ಭಾಲ್ಕಿ	40,14,468	75,76,662	95,76,601
4	ಕೃಉಮಾಸ ಬಸವಕಲ್ಯಾಣ	40,89,473	47,34,937	43,83,330
5	ಕೃಉಮಾಸ ಹುಮನಾಬಾದ್	30,77,667	87,49,765	31,73,629

KARNATAKA LEGISLATIVE ASSEMBLY
No.: 319

Sri. Eshwar Bheemanna Kandre

a. How many agricultural market committees are functioning in Bidar district? (Annual Income of last 3 years to be given)
b. Whether it has come to the notice of the Government that lack of basic facilities exists in agricultural markets in the district?
c. What action will be taken to develop infrastructural facilities?
d. If so, whata action taken by the Government inthis regard?

S.K. Bellubbi
Minister for Agricultural Marketing & Haj & Wakf

a. The details of annual income for the last 3 years is given in annexure.
b. Yes
c. Market fee is the main source of income to the APMCs. From the said income, Statutory and administrative expenses will be met and annual action plan will be prepared by the market committees to take up the developmental works and implement the same.
d. During the year 2011-12, Bhalki, Aurad, Basavakalyana APMCs have been provided each Rs.25.00 lakhs to provide basic facilities under the backward taluk area development program.

ಏತ ತೀರುವಳಿ ಯೋಜನೆ

269 (249)

ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ)

ಅ) ಏಕ ತೀರುವಳಿ ಯೋಜನೆಯಂತೆ ಪಿಕಾರ್ಡ್ ಬ್ಯಾಂಕುಗಳ ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಆಡಳಿತ ಸಮಿತಿಗಳಿಗೆ ಈ ಯೋಜನೆ ಅನುಷ್ಠಾನಗೊಳಿಸಲು ಅವಕಾಶ ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ, ಆದೇಶದ ವಿವರ ನೀಡುವುದು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿ)

ಅ) ಕೆ.ಸಿ.ಸಿ ಬ್ಯಾಂಕ್ ನಿ. ಧಾರವಾಡ ಕೆ.ಡಿ.ಸಿ.ಸಿ ಬ್ಯಾಂಕ್ ನಿ. ಶಿರಸಿ ಬ್ಯಾಂಕ್, ಹಾವೇರಿ ಜಿಲ್ಲೆಯ ಶಿಗ್ಗಾಂವ ಪಿಕಾರ್ಡ್ ಬ್ಯಾಂಕ್ ಮತ್ತು ಹಿರೇಕೆರೂರು ಪಿಕಾರ್ಡ್ ಬ್ಯಾಂಕುಗಳಿಗೆ ಆ ಬ್ಯಾಂಕುಗಳಿಂದ ಬಂದ ಪ್ರಸ್ತಾವಗಳಿಗನುಗುಣವಾಗಿ ಏಕ ತೀರುವಳಿ ಯೋಜನೆ ಅನುಷ್ಠಾನಗೊಳಿಸಲು ಸಹಕಾರ ಸಂಘಗಳ ನಿಬಂಧಕರು ಅನುಮತಿ ನೀಡಿರುತ್ತಾರೆ.